1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.68/2017

ದಿಃ 30.03.2019

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw- 1 Pw-1

| | | |
|---|---|---|
| ಹೆಸರು | ಃ | ಮಹಮ್ಮದ್ ನೂರೂಲ್ಲಾ |
| ತಂದೆಯ ಹೆಸರು | ಃ | ಮಹಮ್ಮದ್ ಅಲಿಜಾನ್ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ಮಾಗಡಿ. |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಆಯಿಷಾ ನನ್ನ ಮಗಳು, ಅವಳು ಮೃತಪಟ್ಟಾಗ ಅವಳ ವಯಸ್ಸು ಒಂಬತ್ತುವರೆ ವರ್ಷ ವಯಸ್ಸು. ಅವಳು 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಆರೋಪಿಗಳು ಗೊತ್ತು ನಮ್ಮ ಮನೆ ಎದುರಿನಲ್ಲಿ ವಾಸವಾಗಿದ್ದಾಳೆ. ದಿಃ 01.03.2017 ರಂದು ರಾತ್ರಿ 9ಗಂಟೆ ಸಮಯದಲ್ಲಿ ಮನೆಯ ಬೀಗ ತೆಗೆದುಕೊಂಡು ಹೋಗಿ ನನ್ನ ಹೆಂಡತಿಗೆ ಕೊಟ್ಟಳು. ಬರುತ್ತೇನಮ್ಮ ಎಂದು ಹೇಳಿ ಓದವಳು ಬರಲಿಲ್ಲ. ಆ ಸಮಯದಲ್ಲಿ ನಾನು ಜಮೀರ್ ಎನ್ನುವವರ ಮನೆಗೆ ಹೋಗಿದ್ದೆ. ಆ ಮೇಲೆ ನಾನು ವಾಪಸ್ಸು 9.30ಗಂಟೆ ಮನೆಗೆ ಬಂದು

ನೋಡಿದಾಗ ನನ್ನ ಮಗಳು ಆಯಿಷಾ ಮನೆಯಲ್ಲಿ ಇರಲಿಲ್ಲ. ಅವಳನ್ನು ಎಲ್ಲ ಕಡೆ ಹುಡಿಕಾಡಿದೆ ಸಿಗಲಿಲ್ಲ. ಶಾಬಜ್ ಕಲಂದರ್ ನಮ್ಮ ಮನೆಯಲ್ಲಿದ್ದ. ಶಾಬಜ್ ಕಲಂದರ್ 1ನೇ ಆರೋಪಿಯ ಅಣ್ಣನ ಮಗ. ರಾತ್ರಿ 11 ಗಂಟೆ ವರೆಗೆ ಹುಡಿಕಿ ನಂತರ ಪೊಲೀಸ್ ಠಾಣೆಗೆ ಹೋದೇವು ಪೊಲೀಸರು ಮತ್ತು ಹುಡುಕಲು ಹೇಳಿದರು. 2ನೇ ತಾರೀಖಿನವರೆಗೂ ಹುಡಿಕಿದೇವು. 2ನೇ ತಾರೀಖು ನಮ್ಮ ಮಗು ಕಾಣೆಯಾಗಿದ್ದಾಳೆ ಎಂದು ಸಾಕ್ಷಿದಾರರು ನೀಡಿದ್ದ ದೂರು ಗುರುತಿಸಿದ್ದು ಅವುಗಳು ನಿಪಿ 1 ಮತ್ತು 1(ಎ) ಎಂದು ಗುರುತಿಸಲಾಯಿತು. ನಂತರ ದಿಃ 03.03.2017ರಂದು ಶುಕ್ರವಾರ ನಾವು ನಾಮಾಜ್‌ಗೆ ಹೋಗಿ ಬಂದಾಗ ಆಸಿಫ್‌ಖಾನ್ ಎನ್ನುವವರು ಹೊಸಹಳ್ಳಿಯ ಸಕ್ಕೂರು ಆಸ್ಥಾನದ ಹಿಂಭಾಗದಲ್ಲಿ ಒಂದು ಹೆಣ್ಣು ಮಗುವಿನ ಮೃತದೇಹ ಬಿದಿದ್ದೆ ಎಂದು ತಿಳಿಸಿದರು. ಆ ಮೇರೆಗೆ ನಾನು 3ಃ15 ಗಂಟೆ ನಾವು ಅಲ್ಲಿಗೆ ಹೋಗಿ ನೋಡಿದಾಗ ಆ ಮೃತ ದೇಹ ನನ್ನ ಮಗಳದಾಗಿತ್ತು. ಆ ಮೃತದೇಹ ಗುರುತುಹಿಡಿಯದಷ್ಟು ವಿಕಾರ ಆಗಿತ್ತು, ಬಟ್ಟೆ ನೋಡಿ ಗುರುತಿಸಿದೇವು. ಕುತ್ತಿಗೆಗೆ ಟೇಪ್ನಿಂದ ಬಿಗಿದಿದ್ದರು. ಬಾಗಿಗೆಗೆ ಪ್ಲಾಸ್ಟಿಕ್ ಎಲ್ಲಾ ತುಂಬಿದ್ದರು. ಕೈಗೆಲ್ಲಾ ಏನೋನೋ ಮಾಡಿದ್ದರು ಅದನ್ನು ನೋಡಿ ನಮಗೆ ತಡೆದುಕೊಳ್ಳಲು ಆಗಲಿಲ್ಲ. ಪೊಲೀಸರು ಸ್ಥಳಕ್ಕೆ ಬಂದರು.

ಸ್ಥಳದಲ್ಲಿಯೇ ನಾನು ದೂರು ನೀಡಿದೆ ಎಂದು ಗುರುತಿಸಿದ್ದು ಅದನ್ನು ದೂರನ್ನು ಮತ್ತು ಸಹಿಯನ್ನು ನಿಪಿ 2 ಮತ್ತು 2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ್ಥಳ ಪಂಚನಾಮೆ ಕಡತದಲ್ಲಿ ಲಭ್ಯವಿಲ್ಲದ ಕಾರಣ ಸಂಬಂಧಪಟ್ಟ ಗುಮಾಸ್ತರು ದಾಖಲೆಯನ್ನು ಹುಡುಕಿ ಕಡತದೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಲು ನಿರ್ದೇಶಿಸಿದೆ ಈ ಹಿನ್ನಲೆಯಲ್ಲಿ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಉಮೇಶ್ ಮೂಲಿಮನಿ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.